ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ:ಬಿಟಿಇ/01/ಇಬಿಎಲ್(4)2017

ಕಾರ್ಯದರ್ಶಿಯವರ ಕಛೇರಿ,
ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿ,
ಅರಮನೆ ರಸ್ತೆ, ಬೆಂಗಳೂರು-01,
ದಿನಾಂಕ:11.09.2017.

## ಸುತ್ತೋಲೆ

**ವಿಷಯ:** ಪರೀಕ್ಷಾ ಕಾರ್ಯ ನಿರ್ವಹಿಸುವ ಬೋಧಕ/ಬೋಧಕೇತರ ಸಿಬ್ಬಂದಿ ವರ್ಗದವರಿಗೆ ಸಂಭಾವನೆ ಭತ್ಯೆ / ಪ್ರಯಾಣ ಭತ್ಯೆ/ದಿನಭತ್ಯೆಗಳನ್ನು ಖಜಾನೆಯ ಆರ್.ಟಿ.ಜಿ.ಎಸ್ / ಎನ್.ಇ.ಎಫ್.ಟಿ ಮುಖಾಂತರ ನೇರವಾಗಿ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಜಮೆ ಮಾಡುವ ಬಗ್ಗೆ.

**ಉಲ್ಲೇಖ:1** ಸರ್ಕಾರದ ಆದೇಶ ಸಂಖ್ಯೆ:ಆಇ/47/ಟಿಎಆರ್/2014, ದಿನಾಂಕ: 22-12-2014.

**2** ಈ ಕಛೇರಿ ಸುತ್ತೋಲೆ ಸಂಖ್ಯೆ:ಬಿಟಿಇ/3/ಇಬಿಎಲ್(1) 2015-16, 2016-17, ದಿನಾಂಕ:4-5-2016.

**3.** ಈ ಕಛೇರಿ ಸುತ್ತೋಲೆ ಸಂಖ್ಯೆ:ಬಿಟಿಇ/1/ಇಬಿಎಲ್(4)2017, ದಿನಾಂಕ:16-06-2017.

**-0-**

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ಉಲ್ಲೇಖ(1)ರ ಸರ್ಕಾರದ ಆದೇಶದಂತೆ, ಉಲ್ಲೇಖ(2) ಮತ್ತು (3)ರ ಈ ಕಛೇರಿ ಸುತ್ತೋಲೆ ಕಡೆಗೆ ಗಮನ ಸೆಳೆಯುತ್ತಾ, ಮೌಲ್ಯಮಾಪನ ಹಾಗೂ ಇನ್ನಿತರ ಪೂರಕ ಪರೀಕ್ಷಾ ಕಾರ್ಯ ನಿರ್ವಹಿಸಿದ ಸರ್ಕಾರಿ/ಅನುದಾನಿತ/ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿನ ಉಪನ್ಯಾಸಕರು/ಕಾರ್ಯಗಾರ ಸಿಬ್ಬಂದಿ/ಬೋಧಕೇತರ ಸಿಬ್ಬಂದಿ ವರ್ಗದವರಿಗೆ ಪಾವತಿಸುವ ಸಂಭಾವನೆ/ದಿನಭತ್ಯೆ/ಪ್ರಯಾಣ ಭತ್ಯೆಯನ್ನು ಖಜಾನೆಯ ಆರ್.ಟಿ.ಜಿ.ಎಸ್./ಎನ್.ಇ.ಎಫ್.ಟಿ ಮುಖಾಂತರ ನೇರವಾಗಿ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಜಮೆ ಮಾಡಬೇಕಾಗಿರುತ್ತದೆ. ಈ ಪದ್ದತಿಯನ್ನು 2016ನೇ ಸಾಲಿನಿಂದ ಜಾರಿಗೊಳಿಸಿರುವುದರಿಂದ ಫಲಾನುಭವಿಗಳ ಹೆಸರು, ಬ್ಯಾಂಕ್ ಖಾತೆ ಸಂಖ್ಯೆ, ಬ್ಯಾಂಕಿನ ಐ.ಎಫ್.ಎಸ್.ಸಿ. ಸಂಕೇತ ಮುಂತಾದ ವಿವರಗಳೊಂದಿಗೆ ಖಜಾನೆಗೆ ಹಣ ಸೆಳೆಯುವ ಅಧಿಕಾರಿಯು (ಡಿಡಿಓ) ಸಾದಿಲ್ವಾರು ಬಿಲ್ಲನ್ನು ಸಲ್ಲಿಸಬೇಕಾಗಿರುತ್ತದೆಂದು ಸೂಚಿಸಲಾಗಿರುತ್ತದೆ.

E-Gov
Pl. upload
11/9/17

ಪ್ರಸ್ತುತ, ನವೆಂಬರ್ 2016ನೇ ಸಾಲಿನ ಸೆಮಿಸ್ಟರ್ ಪರೀಕ್ಷೆಯ ಹಾಗೂ ಮೇ 2017ನೇ ಸಾಲಿನ ಸೆಮಿಸ್ಟರ್ ಪರೀಕ್ಷೆಯ ಪ್ರಾಯೋಗಿಕ ಪರೀಕ್ಷೆ/ಕೊಠಡಿ ಮೇಲ್ವಿಚಾರಣೆ/ಪರೀಕ್ಷಾ ಪೂರ್ವ ಸಿದ್ಧತೆ/ಕಛೇರಿ ಸಿಬ್ಬಂದಿಯವರ ಸಂಭಾವನೆ/ ದಿನಭತ್ಯೆ/ ಪ್ರಯಾಣ ಭತ್ಯೆಯ ಬಿಲ್ಲುಗಳನ್ನು ಸಂಬಂಧಪಟ್ಟ ಸಂಸ್ಥೆಗಳ ಪ್ರಾಚಾರ್ಯರ ಮುಖಾಂತರ ಪ್ರಸ್ತಾವನೆಗಳನ್ನು ಸಲ್ಲಿಸಿರುತ್ತಾರೆ. ಈ ಸಂಬಂಧ ಪರಿಶೀಲಿಸಲಾಗಿ, ಕೆಲವು ಸಂಸ್ಥೆಗಳ ಪ್ರಾಚಾರ್ಯರುಗಳು / ಉಪನ್ಯಾಸಕರು/ ಬೋಧಕೇತರ ಸಿಬ್ಬಂದಿ ವರ್ಗದವರು ಯಾವುದೇ ದಾಖಲೆಯನ್ನು ಸಲ್ಲಿಸದೆ ಬಿಲ್ಲುಗಳನ್ನು ಸಲ್ಲಿಸಿರುತ್ತಾರೆ. ಪ್ರಾಯೋಗಿಕ ಪರೀಕ್ಷೆಯ ಸಂಭಾವನೆ ಹಾಗೂ ಪ್ರಯಾಣ ಭತ್ಯೆ/ದಿನಭತ್ಯೆ ಬಿಲ್ಲುಗಳ

ಕಾರ್ಯ ನಿರ್ವಹಣೆಗೆ ಪ್ರತ್ಯೇಕ ವಿಷಯ ನಿರ್ವಾಹಕರಿರುವುದರಿಂದ ಎರಡೂ ಬಿಲ್ಲುಗಳನ್ನು ಪ್ರತ್ಯೇಕವಾಗಿಯೇ ಸಲ್ಲಿಸತಕ್ಕದ್ದು. ಹಾಗೂ ಬ್ಯಾಂಕ್ ಖಾತೆಯ ವಿವರವನ್ನು ಸಹ ಪ್ರತ್ಯೇಕವಾಗಿಯೇ ಸಲ್ಲಿಸುವುದು. ಸಂಭಾವನೆ ಬಿಲ್ಲುಗಳಿಗೆ ಎ.ಐ.ಸಿ.ಟಿ.ಇ. ವೇತನ ಪಡೆಯದಿರುವ ಬಗ್ಗೆ ಪ್ರಾಂಶುಪಾಲರಿಂದ ದೃಢೀಕರಿಸಿದ ಪ್ರಪತ್ರ ಲಗತ್ತಿಸುವುದು. ತಮ್ಮ ಸಂಸ್ಥೆಗಳಿಂದ ವೇತನ ಸಂದಾಯವಾಗುತ್ತಿರುವ ಬ್ಯಾಂಕ್ ಖಾತೆಯ ಮಾಹಿತಿಯನ್ನೇ ನೀಡತಕ್ಕದ್ದು ಹಾಗೂ 06 ತಿಂಗಳಿಂದ ಚಾಲ್ತಿಯಲ್ಲಿರುವ ಬ್ಯಾಂಕ್ ಖಾತೆಯ ವಿವರವನ್ನು ನೀಡತಕ್ಕದ್ದು. ಇಲ್ಲದಿದ್ದಲ್ಲಿ ಆರ್.ಬಿ.ಐ.ನಿಯಮಗಳನ್ವಯ ಹಣ ಜಮೆಯಾಗುವುದಿಲ್ಲ.

ಇದಲ್ಲದೆ ಪ್ರಶ್ನೆ ಪತ್ರಿಕೆಗಳನ್ನು ಸಂರಕ್ಷಿಸುವ ಕಾರ್ಯ ನಿಮಿತ್ತ ಖಜಾನೆ ಸಿಬ್ಬಂದಿ ಹಾಗೂ ಆರಕ್ಷಕ ಠಾಣೆ ಸಿಬ್ಬಂದಿಯವರ ಸಂಭಾವನೆಯ ಭತ್ಯೆಯ ಬಿಲ್ಲುಗಳಿಗೂ ಸಹ ಬ್ಯಾಂಕ್ ಖಾತೆಯ ಮಾಹಿತಿಯನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ಬಿಲ್ಲುಗಳನ್ನು ವಿಲೇ ಮಾಡಲು ಸಾಧ್ಯವಾಗುತ್ತಿಲ್ಲ. ಈ ಪತ್ರದೊಂದಿಗೆ ಲಗತ್ತಿಸಿರುವ ನಿಗದಿತ ನಮೂನೆಯಲ್ಲಿ ಮಾಹಿತಿಯನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದೆಂದು ಸಂಬಂಧಪಟ್ಟ ಸಂಸ್ಥೆಯ ಪ್ರಾಚಾರ್ಯರುಗಳು ಸೂಚಿಸಬೇಕೆಂದು ಈ ಮೂಲಕ ಸೂಚಿಸಲಾಗಿದೆ.

ಈಗಾಗಲೇ ನವೆಂಬರ್ 2016 ಹಾಗೂ 2017ನೇ ಮೇ ಸೆಮಿಸ್ಟರ್ ಪರೀಕ್ಷೆಯ ಪ್ರಾಯೋಗಿಕ / ಕೊಠಡಿ ಮೇಲ್ವಿಚಾರಣೆ / ಪರೀಕ್ಷಾ ಪೂರ್ವ ಸಿದ್ಧತೆ / ಕಛೇರಿ ಸಿಬ್ಬಂಧಿಯವರ ಸಂಭಾವನೆ ಬಿಲ್ಲುಗಳನ್ನು ಸಲ್ಲಿಸಿದ್ದು, 80%ರಷ್ಟು ಎಲ್ಲಾ ಸಂಸ್ಥೆಯವರು ಅಪೂರ್ಣ ಮಾಹಿತಿಯನ್ನು ಸಲ್ಲಿಸಲಾಗಿರುತ್ತದೆ (ಬ್ಯಾಂಕ್ ಖಾತೆ ಸಂಖ್ಯೆ ಮತ್ತು ಐ.ಎಫ್.ಎಸ್.ಸಿ. ಸಂಖ್ಯೆ). ಪರೀಕ್ಷಾ ಪೂರ್ವ ಸಿದ್ದತೆ ಕಾರ್ಯ ನಿರ್ವಹಿಸಿದವರ ಬಿಲ್ಲಿಗೆ ಕಡ್ಡಾಯವಾಗಿ Abstractನೊಂದಿಗೆ ಸಲ್ಲಿಸತಕ್ಕದ್ದು. ಪ್ರತಿ ಬಾರಿ ಬಿಲ್ಲು ಸಲ್ಲಿಸಿದಾಗ ಬೇರೆ ಬೇರೆ ಬ್ಯಾಂಕ್ ಖಾತೆಯ ಮಾಹಿತಿಯನ್ನು ಸಲ್ಲಿಸಿರುವುದು ಕಂಡುಬರುತ್ತದೆ. ಇದರಿಂದಾಗಿ ಅನಗತ್ಯವಾಗಿ ಕಾರ್ಯ ನಿರ್ವಹಣೆಯಲ್ಲಿ ವಿಳಂಬವಾಗಿರುತ್ತದೆ. ಆದ್ದರಿಂದ ತಮ್ಮ ಸಂಸ್ಥೆಯಿಂದ ಮೇಲ್ಕಂಡ ಅವಧಿಗೆ ಈಗಾಗಲೇ ಸಲ್ಲಿಸಲಾಗಿರುವ ಬಿಲ್ಲುಗಳ ಕಛೇರಿ ಪ್ರತಿಯನ್ನು ಪರಿಶೀಲಿಸಿ ಬ್ಯಾಂಕ್ ವಿವರಗಳ ಮಾಹಿತಿಯನ್ನು ಸಲ್ಲಿಸದೇ ಇರುವವರ ಮಾಹಿತಿಯನ್ನು ಸಂಸ್ಥೆಯ ಹೆಸರು ಹಾಗೂ ಸಂಸ್ಥೆಯ ಸಂಕೇತವನ್ನು (College Code) ನಮೂದಿಸಿ, ಈ ಕೆಳಕಂಡ ಇ-ಮೇಲ್ ವಿಳಾಸಕ್ಕೆ ನಿಗದಿತ ನಮೂನೆಯಲ್ಲಿ 03 ದಿನದೊಳಗಾಗಿ ಕಳುಹಿಸತಕ್ಕದ್ದು. ಇಲ್ಲದಿದ್ದ ಪಕ್ಷದಲ್ಲಿ ಬಿಲ್ಲುಗಳನ್ನು ವಿಲೇ ಮಾಡಲು ಸಾಧ್ಯವಾಗುವುದಿಲ್ಲ. ಇದರಿಂದ ಮಂಜೂರಾದ ಅನುದಾನವನ್ನು ನಿಗದಿತ ಅವಧಿಯಲ್ಲಿ ಖರ್ಚು ಮಾಡಲು ಸಾಧ್ಯವಾಗುತ್ತಿಲ್ಲ. ಮುಂದಿನ ಆಗುಹೋಗುಗಳಿಗೆ ಸಂಬಂದ ಪಟ್ಟ ಸಂಸ್ಥೆಯ ಪ್ರಾಚಾರ್ಯರುಗಳೇ ನೇರ ಹೊಣೆಗಾರರಾಗುವರೆಂದು ಈ ಮೂಲಕ ಸೂಚಿಸಲಾಗಿದೆ.

ಈ ಸುತ್ತೋಲೆಯೊಂದಿಗೆ ಲಗತ್ತಿಸಲಾಗಿರುವ ಅನುಬಂಧದಲ್ಲಿ ಸೂಚಿಸಲಾಗಿರುವ ಸಂಸ್ಥೆಯ ಹೆಸರು/ಅಧಿಕಾರಿ/ಸಿಬ್ಬಂದಿಯವರ ಹೆಸರಿನ ಮುಂದೆ ನಮೂದಿಸಲಾದ ದಾಖಲೆಯನ್ನು 03 ದಿನಗಳೊಳಗಾಗಿ bteebl2016@gmail.com ಇಮೇಲ್ ಐಡಿ ವಿಳಾಸಕ್ಕೆ ಕಳುಹಿಸಬೇಕೆಂದು ಈ ಮೂಲಕ ಕೋರಲಾಗಿದೆ.

ಕಾರ್ಯದರ್ಶಿ,
ತಾಂತ್ರಿಕ ಪರೀಕ್ಷಾ ಮಂಡಳಿ,
ಬೆಂಗಳೂರು.

**ಇವರಿಗೆ:**

1. ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಸಂಸ್ಥೆಯ ಪ್ರಾಚಾರ್ಯರುಗಳಿಗೆ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ.
2. ಪ್ರಶ್ನೆ ಪತ್ರಿಕೆಗಳನ್ನು ಸಂರಕ್ಷಣಾ ಕಾರ್ಯ ನಿರ್ವಹಿಸುವ ಜಿಲ್ಲ/ತಾಲ್ಲೂಕು ಉಪ ಖಜಾನಾಧಿಕಾರಿಗಳು ಹಾಗೂ ಆರಕ್ಷಣ ಠಾಣೆ ಅಧಿಕಾರಿಗಳಿಗೆ ಸದರಿ ಸುತ್ತೋಲೆಯನ್ನು ಅವಗಾಹನೆಗೆ ತರಬೇಕೆಂದು ಸಂಬಂಧಪಟ್ಟ ಸಂಸ್ಥೆಯ ಪ್ರಾಚಾರ್ಯರುಗಳಿಗೆ ಸೂಚಿಸಲಾಗಿದೆ.

**ಪ್ರತಿ:**

ಶ್ರೀ ಶ್ರೀನಿವಾಸ್, ಸಂಯೋಜನಾಧಿಕಾರಿ, ಹೆಚ್.ಆರ್.ಎಂ.ಎಸ್.ವಿಭಾಗ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಇವರಿಗೆ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ.

| FORMAT | |
| --- | --- |
| INSTITUTION NAME | |
| INSTITUTION CODE | |
| EMPLOYEE NAME<br><br>(CAPITAL LETTERS) | |
| DESIGNATION | |
| BRANCH (Subject wise) | |
| BASIC PAY | |
| KGID NO./EMPLOYEE No. | |
| Existing Receipient ID (If any) | |
| BANK ACCOUNT NO.<br>(A/C No. Details in Pass Book Xerox) | |
| IFSC CODE | |
| NAME OF THE BANK | |
| NAME OF THE BANK BRANCH | |
| ACCOUNT TYPE | |
| PHONE NUMBER | |
| | |